7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8 ಹಿಡುವಳಿಯಲ್ಲಿ ಇಲ್ಲದ ಜವಿಾನುಗಳನ್ನ ಸರ್ಕಾರದವರು ದರಖಾಸ್ತು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜವಿಾನುಗಳಲ್ಲಿ ಶಿಕ್ಕುವ ಕುರಂಗಡ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ

9. ಕಲ್ಲುಗಳನ್ನ ಜವಾಯಿಸುವದಕ್ಕಾಗಿ ಜವಿಾನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟ್.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸಾಮಸ್ತ ಜನಗಳಿಗೂ ತಿಳಿಯಹಡಿಸುವದೇನಂದರೆ:—

ಸ್ಯ 1896–97ನೇ ಸಾಲಿಗೆ ಮದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜವಿಾನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು ಜವಾಯಿಸಿಕೊಳ್ಳುವ ಹಕ್ಕುದಾಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಪ್ರಾರಂಭವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮದ್ದಗಿರಿ ತಾರೀಖು 29—9—96 ಮದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಪ್ರತಿದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೀವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಆವಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೀವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೀರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲಕ್ಷಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಮುಂಟಾಗುವ ಫಾಯಿದೆ ಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜವಿಾನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5 ಗಾಮು ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸುಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 15.

ಮೃತಪಟ್ಟ ಕಾಳಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನರಸುಂಹ್ಮ ಮೈನರ್, ಗಾರ್ಡಿಯರ್ ಜನಕತಂದೆ ಚನ್ನನಾಯಿಕ ವುರಫ್ ಚೆನ್ನಣನವರು, ಮೃತಪಟ್ಟ ಸದರೀ ಕಾಳಪ್ಪನವರಿಗೆ ಮೈನರ್ ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸೋಬಳಿ ಚಿನ್ನನಾಯಿಕನ ಕೊಪ್ಪಲ್ ಸ್ಥಳದ ಸದರೀ ಚೆನ್ನನಾಯಿಕ ವುರಫ್ ಚೆನ್ನಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕಾಳಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನನಾಯಿಕ ವುರಫ್ ಚೆನ್ನಣ್ಣನವರ ಅರ್ಜಿಯನ್ನು ಸ್ಯ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಕಾಳಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 42.

ಮೃತಪಟ್ಟ ಮೈಸೂರು ರಂಗಾಚಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀನಿವಾಸಯ್ಯಂಗಾರ್ ಮೈನರ್ ಗಾರ್ಡಿಯರ್ ತಾಯಿ ಶ್ರೀರಂಗಮ್ಮನವರು, ಮೃತಪಟ್ಟ ಸದರೀ ರಂಗಾಚಾರ್ರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹೊಸಅಗ್ರಹಾರ ಸ್ಥಳದ ಸದರೀ ಶ್ರೀರಂಗಮ್ಮನವರು, ಸದರೀ ವಾಸಸ್ಥರಾಗಿ

ಮೃತಪಟ್ಟ ರಂಗಾಚಾರ್ಯ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀರಂಗಮ್ಮನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಾಚಾರ್ಯರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 78.

ಮೃತಪಟ್ಟ ನಂಜಕ್ಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮುದ್ದಮ್ಮ, ವೀರಕಟ್ಟರು ಸದರಿ ಮೃತಪಟ್ಟ ಸದರೀ ನಂಜಕಟ್ಟರಿಗೆ ಅಕ್ಕ, ಸೋದರಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಮಳಿಂದೂರು ಕಸಬಾ ಸ್ಥಳದ ಸದರೀ ಮುದ್ದಮ್ಮ, ವೀರಕಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ನಂಜಕಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುದ್ದಮ್ಮ, ವೀರಕಟ್ಟರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 28ನೆಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಕಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 79.

ಮೃತಪಟ್ಟ ಅಚ್ಚಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀಕಂಠಯ್ಯನವರು, ಮೃತಪಟ್ಟ ಸದರೀ ಅಚ್ಚಮ್ಮನವರಿಗೆ, ಮೈದನನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೊಡ್ಡಪ್ಯಾಟೆ ಸ್ಥಳದ ಸದರೀ ಶ್ರೀಕಂಠಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಅಚ್ಚಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀಕಂಠಯ್ಯನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಚ್ಚಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಆಗಸ್ಟ್ತಿಂಗಳ 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಗೆ ಸಹ್ಯ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 80.

ಮೃತಪಟ್ಟ ಜೀವಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸುಬ್ಬರಾವ್ ಮೈಸರ್, ಗಾರ್ಡಿಯ್ ತಾಯಿ ನಾಗೂಬಾಯಿಯವರು, ಮೃತಪಟ್ಟ ಸದರೀ ಜೀವಣರಾಯರಿಗೆ ಮಗ, ಜೀವತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹಳೇಅಗ್ರಹಾರ ಸ್ಥಳದ ಸದರೀ ನಾಗೂಬಾಯಿಯವರು, ಸದರೀ ವಾಸಸ್ಥರಾಗಿ ಮೃತಪಟ್ಟ ಜೀವಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾಗೂಬಾಈರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸಪ್ಟೆಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೀವಣರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 80.

ಮೃತಪಟ್ಟ ಕುಂಚಿಗರ ಚಿಕ್ಕಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿ. ಚಿಕ್ಕಣ್ಣನವರು, ಮೃತಪಟ್ಟ ಸದರೀ ಚಿಕ್ಕಣ್ಣನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಜಲಾ ಸ್ಥಳದ ಸದರೀ ಚಿಕ್ಕಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ 950 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕಣ್ಣನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಟ್ಟತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 81.

ಮೃತಪಟ್ಟ ಹಾರ್ಡ್ ಜವಾಲಕೇಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಜಾನಸ್ ಜವಾಲಕೇಟರು, ಮೃತಪಟ್ಟ ಸದರೀ ಹಾರ್ಡ್ ಜವಾಲ್ಕೇಟರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರ ದೊಡ್ಡಪ್ಯಾಟೆ ಸ್ಥಳದ ಸದರೀ ಜಾನಸ್ ಜವಾಲ್ಕೇಟರು, ಸದರೀ ವಾಸಸ್ಥರಾಗಿ ಮೃತಪಟ್ಟ ಹಾರ್ಡ್ ಜವಾಲಕೇಟರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜಾನಸ್ ಜವಾಲಕೇಟರ ಅರ್ಜಿಯನ್ನು 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಾರ್ಡ್ ಜವಾಲಕೇಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಞ 1896—97ನೇ ಇಸವಿ ಅರ್ಜೀ ನಂಬರ್ 82.

ಮೈಸೂರ್ ಕಿಲ್ಲೇಯಲ್ಲಿರುವ 1ನೇ ಪುಟ್ಟನಂಜಪ್ಪ, 2ನೇ ಪಾರ್ವತೆಮ್ಮ, 3ನೇ ಗುರುಶಾಂತಮ್ಮ ಇವರು ಮೈನರ್‌ಗಳು, ಗಾರ್ಡಿಯರ್ ಅರ್ಜೆದಾರ್ ಜೆಲಿ ಭದ್ರಮ್ಮನವರು, ಮೈನರಾದ ಮೈಸೂರ್ ಕಿಲ್ಲೇ ಸ್ಥಳದ 1ನೇ ಪುಟ್ಟನಂಜಪ್ಪ, ಪಾರ್ವತೆಮ್ಮ, ಗುರುಶಾಂತಮ್ಮ ಇವರುಗಳ ಆಸ್ತೀ ವಿಷಯವಾದಲ್ಲಿ—

ಸದರೀ ಮೈನರಾದ ಪುಟ್ಟನಂಜಪ್ಪ ವಗೈರೇರಿಗೆ ಆಜ್ಞೀ ಆಗಬೇಕೆಂಬ ಹಕ್ಕಿನ ಮೇಲೆ ಡಿಪೋ ಮೈಸೂರ್ ಕಿಲ್ಲೇ ಸ್ಥಳದ ಸದರೀ ಭದ್ರಮ್ಮನವರು, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ 1896ನೇ ಇಸವಿ ಸೆಪ್ಟಂಬರ್ ತಾರೀಖು 17ರಲ್ಲು ನೊಕರರ್ ಮಾಡಿರುವದುಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಞ 1896ನೇ ಇಸವಿ ಆಗಸ್ಟ್‌ತಿಂಗಳ 26ನೇ ತಾರೀಖಿನಲ್ಲಿ ಕೋರ್ಟು ವೊಪರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ತುಮಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ್ ಚನ್ನಕಟ್ಟೆ ಹಳ್ಳಿ ಪ್ಯಾಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಕಟ್ಟೆಹಳ್ಳಿ ಪ್ಯಾಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೊ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	249	568	6	3
ಹಳೇ ಬಿದರುಗಳು ..	544			

ಗುಬ್ಬೀ ತಾಲ್ಲೂಕು ಚನ್ನಕಟ್ಟಹಳ್ಳಿ ಪ್ಯಾಟೇರ್ಷ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	1190			

ಹರಾಜು ವೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದಾದ ಕೂಡ್ಲೆ ಕಾಲುಹಿಸ್ಸೇ ವೊಬಲಗು ತೇವಣಿ ತರೀಕ ಹಾಜರ್ಮಾಡಬೇಕು. ಬಾ? ವೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ವೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಪೀಲುಗಳಿಗೆ 1895ನೇ ಇಸವಿ ಏಪ್ರೀಲ್ 25ನೇ ಮುಕ್ತಂ ಮೈಸೂರ್ ಗೆಜೆಟ್ 1ನೇ ಭಾಗದಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ತಂ 15229ನೇ ನಂಬರು ಗವರ್ನಮೆಂಟ್ ನೋಟಿಫಿಕೇರ್ಷನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಫೈಂಚ್‌ರಾಕ್ಸ್ ಸಬ್ ಡಿವಿಜ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಪಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದಕೂಡ್ಲೆ ಜಪಡಸವಾಲ್‌ದಾರನು ತನ್ನ ಸವಾಲ್ ವೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ವೊಬಲಗನ್ನು ತೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತವಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ವೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ವೊಬಲಗನ್ನ ಪಾವತಿ ಮಾಡಬೇಕು.